**JULY 23,2024**

**ALL INDIA RADIO- DHARWAD**

**PRADESH SAMACHARA (KANNADA) 7:05 AM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ವಿವೇಕಾದಿತ್ಯ ಕನಿಯಾಲ**

<><><>

**ಮುಖ್ಯಾಂಶಗಳು:**

- **ಸಮಗ್ರ ಶಿಶು ಯೋಜನೆ; ದ್ವಿ ಭಾಷಾ ಬೋಧನೆಯ, ಪೂರ್ವ ಪ್ರಾಥಮಿಕ ತರಗತಿಗಳು ಕಾರ್ಯಾರಂಭ – ಲಕ್ಷ್ಮೀ ಹೆಬ್ಬಾಳಕರ, ಮಾಹಿತಿ.**
- **ವಾಲ್ಮೀಕಿ ನಿಗಮದ ಹಗರಣ; ಕೇಂದ್ರ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲಿ – ವಿಶ್ವೇಶ್ವರ ಹೆಗಡೆ ಕಾಗೇರಿ, ಲೋಕಸಭೆಯಲ್ಲಿ, ಪ್ರಸ್ತಾಪ.**
- **ಫ್ಯಾಮಿಲಿ ಪ್ಲ್ಯಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ, 75ನೇ ವರ್ಷಕ್ಕೆ ಪದಾರ್ಪಣೆ.**
- **ವಿಶ್ವ ಮೆದುಳು ಆರೋಗ್ಯ ಜಾಗೃತಿ ದಿನದ ಹಿನ್ನೆಲೆ, ರಾಜ್ಯಾದ್ಯಂತ ವಿಶೇಷ ಕಾರ್ಯಕ್ರಮ.**

<><><>

**ಈಗ ವಾರ್ತೆಗಳ ವಿವರ**

<><><>

**ದೇಶದಲ್ಲಿಯೇ ಮೊಟ್ಟ ಮೊದಲ ಬಾರಿಗೆ, ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಮಗ್ರ ಶಿಶು ಯೋಜನೆಯಡಿ, ಸರ್ಕಾರಿ ಮಾಂಟೆಸ್ಸರಿ (LKG, UKG) ಪೂರ್ವ ಪ್ರಾಥಮಿಕ ತರಗತಿಗಳನ್ನು ಆರಂಭಿಸಿದೆ.**

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ ಬೆಂಗಳೂರಿನಲ್ಲಿ ಚಾಲನೆ ನೀಡಿ, ಮಾತನಾಡಿದರು.**

ಅಂಗನವಾಡಿ ಕೇಂದ್ರಗಳ ಉನ್ನತೀಕರಣದ ಮೊದಲ ಭಾಗವಾಗಿ, ಬೆಂಗಳೂರು ನಗರ ಜಿಲ್ಲೆಯಲ್ಲಿ, ಪೂರ್ವ ಪ್ರಾಥಮಿಕ ಶಾಲೆಗಳಿಗೆ ಚಾಲನೆ ನೀಡಲಾಗಿದೆ. ಪುಟಾಣಿಗಳು ಅಂಗನವಾಡಿ ಕೇಂದ್ರಗಳಲ್ಲೇ, ದ್ವಿ ಭಾಷಾ ಮಾಧ್ಯಮದಲ್ಲಿ ಕಲಿಯಲಿದ್ದಾರೆ ಎಂದರು.

<><><>

1 ನೇ ತರಗತಿಯಿಂದ 5 ನೇ ತರಗತಿಯ ವರೆಗೆ, ಕಡ್ಡಾಯವಾಗಿ ಕನ್ನಡ ಕಲಿಕೆಗೆ ಆದ್ಯತೆ ನೀಡಬೇಕು ಎಂದು, ಕನ್ನಡ ಅಭಿವೃದ್ಧಿ  ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ 135ನೇ ವಾರ್ಷಿಕೋತ್ಸವದ ಹಿನ್ನೆಲೆ, ಪಾಟೀಲ ಪುಟ್ಟಪ್ಪ ಸಭಾ ಭವನದಲ್ಲಿ, ಅತಿಥಿಯಾಗಿ ಪಾಲ್ಗೊಂಡು, ಅವರು ಮಾತನಾಡಿದರು.

ದೇಶದ ಇತರೆ ಭಾಷೆಗಳಿಗೆ ಹೋಲಿಸಿದರೆ, ಕನ್ನಡ ಭಾಷೆಯ ಬೆಳವಣಿಗೆಯ ವೇಗ, ಕೇವಲ 3.7 ಶೇಕಡದಷ್ಟಿದೆ. ಪ್ರಾಚೀನ ಭಾಷೆಗಳಲ್ಲಿ ಒಂದಾದ ಕನ್ನಡ ಭಾಷೆಯ ಬೆಳವಣಿಗೆಗೆ, ಸಮರ್ಪಕ ಭಾಷಾ ನೀತಿಯ ಅವಶ್ಯಕತೆ ಇದೆ ಎಂದರು.

ಶಿಕ್ಷಣ ಕ್ಷೇತ್ರದಲ್ಲಿ ವಿಶೇಷ ಕೊಡುಗೆ ನೀಡಿದ, ಶತಮಾನ ಕಂಡ, ಕರ್ನಾಟಕ ಎಜ್ಯುಕೇಶನ್ ಬೋರ್ಡ್‌ಗೆ ವಿಶೇಷ ಗೌರವ ನೀಡಿ, ಪುರಸ್ಕರಿಸಲಾಯಿತು.

ಶಿಕ್ಷಣ ಸುಧಾರಕರು ಕೃತಿಯನ್ನು, ಎಂ.ಎಂ ಕಲಬುರ್ಗಿ ಸ್ಮಾರಕ ರಾಷ್ಟ್ರೀಯ ಟ್ರಸ್ಟ್  ಅಧ್ಯಕ್ಷ ವೀರಣ್ಣ ರಾಜೂರ್ ಬಿಡುಗಡೆ ಮಾಡಿದರು.

<><><>

ಕೇಂದ್ರ ಸರ್ಕಾರ ಗರ್ಭಕಂಠದ ಕ್ಯಾನ್ಸರ್‌ಗೆ ಎಚ್.ಪಿ.ವಿ. ವ್ಯಾಕ್ಸಿನ್ ನೀಡುವುದಾಗಿ,   ಘೋಷಿಸಿದೆ. ಈ ವ್ಯವಸ್ಥೆಯನ್ನು ರಾಜ್ಯಕ್ಕೂ ವಿಸ್ತರಿಸಬೇಕು ಎಂದು, ಕೇಂದ್ರ ಆರೋಗ್ಯ ಸಚಿವರಿಗೆ ಪತ್ರ ಬರೆಯಲಾಗಿದೆ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ್ ಗುಂಡುರಾವ್ ತಿಳಿಸಿದ್ದಾರೆ.

ವಿಧಾನ ಪರಿ ‘ತ್ತಿನಲ್ಲಿ ಸದಸ್ಯ ತಿಪ್ಪೇಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕೇಂದ್ರ ಸರ್ಕಾರ ಗರ್ಭಕಂಠದ ಕ್ಯಾನ್ಸರ್ ರೋಗಿಗಳಿಗೆ ಉಚಿತವಾಗಿ ಔ ‘ಧ ವ್ಯವಸ್ಥೆ ಜಾರಿ ಮಾಡಿದರೆ, ರಾಜ್ಯದಲ್ಲೂ ಅನು  ್ಠಾನಗೊಳಿಸುವುದಾಗಿ, ಹೇಳಿದರು.

<><><>

ರಾಜ್ಯದಲ್ಲಿ ಅಗತ್ಯವಿರುವ ಕಡೆ, ಸರ್ಕಾರಿ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸಲು,  ಸಮಿತಿ ರಚಿಸಲಾಗಿದೆ ಎಂದು, ಉನ್ನತ ಶಿಕ್ಷಣ ಖಾತೆ ಸಚಿವ ಎಂ.ಸಿ.ಸುಧಾಕರ್ ತಿಳಿಸಿದ್ದಾರೆ.

ವಿಧಾನ ಪರಿ ‘ತ್ತಿನ ಪ್ರಶ್ನೋತ್ತರ ಕಲಾಪದಲ್ಲಿ, ಹಿಂದುಳಿದ ಪ್ರದೇಶವಾದ, ರಾಯಚೂರು ಜಿಲ್ಲೆ ಸಿಂಧನೂರಿಗೆ ಮಂಜೂರಾಗಿದ್ದ, ಪಾಲಿಟೆಕ್ನಿಕ್ ಕಾಲೇಜನ್ನು, ಬೆಳಗಾವಿ ಜಿಲ್ಲೆ ಕಾಗವಾಡಕ್ಕೆ ಸ್ಥಳಾಂತರಿಸಿದ ಕಾರಣವನ್ನು, ಸದಸ್ಯ ಬಸನಗೌಡ ಬಾದರ್ಲಿ ಪ್ರಶ್ನಿಸಿದರು.

ಸಚಿವ ಸುಧಾಕರ್ ಉತ್ತರಿಸಿ, ಅನುದಾನಿತ ಕಾಲೇಜುಗಳಿಗೆ ಪಾಲಿಟೆಕ್ನಿಕ್ ಕಾಲೇಜು ಅವಶ್ಯಕತೆ ಇದೆ ಎಂಬುದನ್ನು ಸಮಿತಿ ಅಧ್ಯಯನ ನಡೆಸಿ, ವರದಿ ನೀಡಲಿದೆ. ಬಳಿಕ ಸೂಕ್ತ ತೀರ್ಮಾನ ಕೈಗೊಳ್ಳುವುದಾಗಿ, ಹೇಳಿದರು.

<><><>

ವಾಲ್ಮೀಕಿ ನಿಗಮದ ಹಗರಣವನ್ನು, ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಿ ಸೂಕ್ತ ನಿರ್ದೇಶನ ನೀಡಬೇಕು ಎಂದು, ಬಿಜೆಪಿ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಲೋಕಸಭೆಯ ಶೂನ್ಯ ವೇಳೆಯಲ್ಲಿ ಮನವಿ ಮಾಡಿದರು.

ಪರಿಶಿಷ್ಟ ಸಮುದಾಯದ ಕಲ್ಯಾಣಕ್ಕೆ ಬಳಕೆಯಾಗಬೇಕಿದ್ದ 187 ಕೋಟಿ ರೂಪಾಯಿ ಹಣ ಬೇನಾಮಿ ಖಾತೆಗಳಿಗೆ ವರ್ಗಾವಣೆ ಆಗಿರುವ ಆರೋಪವಿದೆ ಎಂದರು.

<><><>

ಮಹರ್ಷಿ ವಾಲ್ಮೀಕಿ ನಿಗಮಕ್ಕೆ ಸಂಬಂಧಿಸಿದ, ಸುಮಾರು 40 ಕೋಟಿ ರೂಪಾಯಿ, ನೇರವಾಗಿ ರಾಜ್ಯ ಸರ್ಕಾರದ ಖಜಾನೆಯಿಂದ, ಬೇರೆ ಬೇರೆ ಖಾತೆಗಳಿಗೆ ವರ್ಗಾವಣೆಯಾಗಿರುವ ಬಗ್ಗೆ ಮಾಹಿತಿ ಇದೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟೀಕರಣ ಕೊಡಬೇಕು ಎಂದು, ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ, ಹೊಸ ದಿಲ್ಲಿಯಲ್ಲಿ ಆಗ್ರಹಿಸಿದ್ದಾರೆ.

ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹಾಗೂ ಗೋವಿಂದ ಕಾರಜೋಳ ಜೊತೆ, ಅವರು ಸುದ್ದಿಗೋಷ್ಠಿ ನಡೆಸಿದರು.

<><><>

ಪದ್ಮ ವಿಭೂ ´ಣ, ವಿದುಷಿ ಗಂಗೂಬಾಯಿ ಹಾನಗಲ್ ಅವರ 15ನೇ ಪುಣ್ಯತಿಥಿ ಹಿನ್ನೆಲೆ, ಹುಬ್ಬಳ್ಳಿಯ ಗುರುಕುಲದಲ್ಲಿರುವ ಸಮಾಧಿಗೆ ಗೌರವಾರ್ಪಿಸಲಾಯಿತು.

<><><>

ಹುಬ್ಬಳ್ಳಿಯ ವಿದುಷಿ ಗಂಗೂಬಾಯಿ ಹಾನಗಲ್ ಸಂಗೀತ ಗುರುಕುಲವನ್ನು, ಉನ್ನತ ಶಿಕ್ಷಣ ಇಲಾಖೆಗೆ ಹಸ್ತಾಂತರಿಸದೇ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸುಪರ್ದಿಯಲ್ಲಿ, ಉಳಿಸಿಕೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸಿದ್ದಾಗಿ, ಶಾಸಕ ಮಹೇಶ ಟೆಂಗಿನಕಾಯಿ ತಿಳಿಸಿದ್ದಾರೆ.

ವಿಧಾನಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿರುವ ಅವರು, ಗುರು–ಶಿಷ್ಯ ಪರಂಪರೆಯ ಅಪರೂಪದ ಕೊಂಡಿ, ಈ ಗುರುಕುಲ. ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತದ ತೊಟ್ಟಿಲು, ಹುಬ್ಬಳ್ಳಿಯ ಹಿರಿಮೆಯಾಗಿರುವ ಗುರುಕುಲವನ್ನು, ಪುನರುಜ್ಜೀವಿತ ಗೊಳಿಸಲು ಕ್ರಮ ವಹಿಸುವಂತೆ ಒತ್ತಾಯಿಸಿದ್ದಾಗಿ, ಎಕ್ಸ್ ಜಾಲತಾಣದಲ್ಲಿ ಪ್ರಕಟಿಸಿದ್ದಾರೆ.

<><><>

ವಿಧಾನಪರಿಷತ್ತಿನ ಪ್ರತಿಪಕ್ಷ ನಾಯಕರನ್ನಾಗಿ ಛಲವಾದಿ ನಾರಾಯಣಸ್ವಾಮಿ ಅವರನ್ನು ನೇಮಿಸಲಾಗಿದೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಫ್ಯಾಮಿಲಿ ಪ್ಲ್ಯಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ, ಇಂದು ತನ್ನ 75ನೇ ವಾರ್ಷಿಕೋತ್ಸವದ ಹೊಸ್ತಿಲಲ್ಲಿದೆ.

ಎಫ್.ಪಿ.ಎ.ಐ ದೇಶದ ಕುಟುಂಬ ಯೋಜನೆ ಮತ್ತು ಮಹಿಳೆಯರ ಸಂತಾನೋತ್ಪತ್ತಿ ಹಕ್ಕುಗಳ ಬಗ್ಗೆ ಜಾಗ್ರತಿ ಮೂಡಿಸುವಲ್ಲಿ, ವಿಶೇಷ ಮೈಲುಗಲ್ಲಾಗಿ ಗುರುತಿಸಲ್ಪಡುತ್ತದೆ.

ಶ್ರೀಮತಿ ಧನ್ವಂತಿ ರಾಮರಾವ್ ಹಾಗೂ ಅವಬಾಯಿ ವಾಡಿಯಾ ಅವರ ದೂರದೃಷ್ಟಿಯ ಫಲವಾಗಿ, ಎಫ್.ಪಿ.ಎ. ಸ್ಥಾಪನೆಯಾಯಿತು. 1952 ರ, ಮೊದಲ ಪಂಚ ವಾರ್ಷಿಕ ಯೋಜನೆಯಲ್ಲಿ ಈ ಯೋಜನೆಯನ್ನು, ಪರಿಚಯಿಸಲಾಯಿತು.

ಈ ವರ್ಷ ಎಫ್.ಪಿ.ಎ. ಇಂಡಿಯಾ 1 ಲಕ್ಷ ಯುವ ಮಹಿಳೆಯರನ್ನು ಗರ್ಭಕಂಠದ ಕ್ಯಾನ್ಸರ್‌ನಿಂದ ರಕ್ಷಿಸಲು ಆದ್ಯತೆ ನೀಡಿದೆ.

<><><>

ವಿಶ್ವ ಮೆದುಳು ಆರೋಗ್ಯ ಜಾಗ್ರತಿ ದಿನವನ್ನು, ಸೋಮವಾರ ರಾಜ್ಯಾದ್ಯಂತ ಆಚರಿಸಿದ ವರದಿಗಳು ಬಂದಿವೆ.

ಮನೋ ಆರೋಗ್ಯ, ಮಾನಸಿಕ ಸ್ವಸ್ಥತೆ ಮತ್ತು ಮೆದುಳಿನ ಆರೋಗ್ಯ ಕಾಪಾಡಲು, ಅತ್ಯಾಧುನಿಕ ಸೌಲಭ್ಯ ಮತ್ತು 'ಟೆಲಿ ಮಾನಸ್' ಉಚಿತ ಆಪ್ತ ಸಮಾಲೋಚನೆ ಸಹಾಯವಾಣಿ ಲಭ್ಯವಿದೆ. ಯೋಗಾಭ್ಯಾಸದೊಂದಿಗೆ, ಮನೋದೈಹಿಕ ಕಾಯಿಲೆಗಳನ್ನು ನಿಯಂತ್ರಿಸಬಹುದು ಎಂದು, ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾಕ್ಟರ್ ತಿಮ್ಮಪ್ಪ ಹೇಳಿದ್ದಾರೆ.

ಸಿಮ್ಸ್ ಸೂಪರ್ ಸ್ಪೆ ೇಲಿಟಿ ಆಸ್ಪತ್ರೆಯಲ್ಲಿ 'ವಿಶ್ವ ಮೆದುಳು ದಿನ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

<><><>

ವಿಜಯನಗರ ಜಿಲ್ಲೆಯಲ್ಲಿ, ಶುಶ್ರೂಷೆ ವಿದ್ಯಾರ್ಥಿಗಳ, ಮೆದುಳು ಆರೋಗ್ಯ ಜನ ಜಾಗೃತಿ ಜಾಥಾಕ್ಕೆ, ಜಿಲ್ಲಾ ಆರೋಗ್ಯಾಧಿಕಾರಿ, ಶಂಕರ್ ನಾಯಕ್ ಚಾಲನೆ ನೀಡಿದರು.

<><><>

ಹವಾಮಾನ ವೈಪರಿತ್ಯ ತಡೆಗೆ ಐ.ಐ.ಟಿ.ಯಲ್ಲಿ ತರಬೇತಿ ಪಡೆದ ಇಂಜಿನಿಯರ್‌ಗಳು, ವಿಜ್ಞಾನಿಗಳು ಮುಂದಾಗಬೇಕು ಎಂದು, ಅಮೆರಿಕದ ಖಗೋಳ ವಿಜ್ಞಾನ ಮತ್ತು ಗ್ರಹ ವಿಜ್ಞಾನ ಪ್ರಾಧ್ಯಾಪಕ ಶ್ರೀನಿವಾಸ ಕುಲಕರ್ಣಿ ಹೇಳಿದ್ದಾರೆ.

ಧಾರವಾಡದ ಐ.ಐ.ಟಿ.ಯ ಕೇಂದ್ರೀಯ ಕಲಿಕಾ ಸಭಾಂಗಣದಲ್ಲಿ, ಸೋಮವಾರ ನಡೆದ, ಐದನೇ ಘಟಿಕೋತ್ಸವದಲ್ಲಿ, ದಿಕ್ಸೂಚಿ ಭಾಷಣ ಮಾಡಿದ ಅವರು, ಹವಾಮಾನ ವೈಪರಿತ್ಯ ಜಗತ್ತಿನ ಮೇಲೆ ಪರಿಣಾಮ ಬೀರುತ್ತಿದೆ. ಮೂರು ದಶಕಗಳಲ್ಲಿ ದಕ್ಷಿಣ ಏಷ್ಯಾ ಭಾಗದಲ್ಲಿ ತಾಪಮಾನ 3 ಡಿಗ್ರಿ ಸೆಲ್ಸಿಯಸ್ ಏರುವ ಸಾಧ್ಯತೆ ಇದೆ ಎಂದರು.

ಆರ್ಥಿಕತೆಯ ಕ್ಷಿಪ್ರ ಬೆಳವಣಿಗೆಯೇ ಬಡತನವನ್ನು ತಗ್ಗಿಸುವ ಏಕೈಕ ಮಾರ್ಗ ಎಂದು ಪ್ರತಿಪಾದಿಸಿದರು.

ಧಾರವಾಡ ಐಐಟಿ ನಿರ್ದೇಶಕ ಪ್ರೊಫೆಸರ ವೆಂಕಪ್ಪಯ್ಯ ದೇಸಾಯಿ ಪಾಲ್ಗೊಂಡಿದ್ದರು.

<><><>

ಉತ್ತರಕನ್ನಡ ಜಿಲ್ಲೆ, ಅಂಕೋಲಾ ತಾಲೂಕಿನ ಶಿರೂರು ಗುಡ್ಡ ಕುಸಿದ ದುರ್ಘಟನೆ ಸ್ಥಳದಲ್ಲಿ, ಶೋಧ ಕಾರ್ಯ ಮುಂದುವರೆದಿದೆ.

ಶೋಧ ಕಾರ್ಯದಲ್ಲಿ ಎನ್.ಡಿ.ಆರ್.ಎಫ್, ಎಸ್.ಡಿ.ಆರ್.ಎಫ್ ತಂಡದೊಂದಿಗೆ ಭಾರತೀಯ ಸೇನೆ ಸಹ ಕೈ ಜೋಡಿಸಿದೆ.

ಸೇನಾ ಪಡೆ GPR (Ground penetrating radar) ಮೂಲಕ, ಕೇರಳದ ಲಾರಿ ಚಾಲಕ ಅರ್ಜುನ ಹಾಗೂ ಉಳಿದವರ ಪತ್ತೆ ಕಾರ್ಯ ಮುಂದುವರೆದಿದೆ.

<><><>

ಯಾದಗಿರಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಹಾಗೂ ಹಿರಿಯ ವೈದ್ಯ ಡಾಕ್ಟರ್ ವೀರಬಸವಂತರೆಡ್ಡಿ ಮುದ್ನಾಳ ಅನಾರೋಗ್ಯದಿಂದ ಸೋಮವಾರ ನಿಧನರಾದರು. ಅವರಿಗೆ 76 ವರ್ಷ ವಯಸ್ಸಾಗಿತ್ತು.

ಯಾದಗಿರಿ ಜಿಲ್ಲೆ ರಚನೆಯಾಗುವಲ್ಲಿ, ಅವರ ಪಾತ್ರ ಪ್ರಮುಖವಾಗಿತ್ತು ಎಂದು ಗಣ್ಯರು ಕಂಬನಿ ಮಿಡಿದಿದ್ದಾರೆ.

ಪಾರ್ಥಿವ ಶರೀರದ ಅಂತ್ಯಕ್ರಿಯೆ, ಇಂದು ಮಧ್ಯಾಹ್ನ 3 ಗಂಟೆಗೆ, ಸ್ವಗ್ರಾಮ ಮುದ್ನಾಳ್ ದಲ್ಲಿ ಜರುಗಲಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

ಇಂದು, ಮಹಾನ್ ಸ್ವಾತಂತ್ರ್ಯ ಸೇನಾನಿ, ಚಂದ್ರಶೇಖರ ಆಝಾದ್, ಲೋಕಮಾನ್ಯ ಬಾಲಗಂಗಾಧರ ತಿಲಕ ಅವರ ಜಯಂತಿ. ಆಝಾದ್ ಹಿಂದ್ ಫೌಜ್‌ನ ಕ್ಯಾಪ್ಟನ್ ಹಾಗೂ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ್ತಿ ಲಕ್ಷ್ಮೀ ಸಹಗಲ್ ಅವರ ಪುಣ್ಯತಿಥಿ.

ಕೇಂದ್ರ ಹಣಕಾಸು ಖಾತೆ ಸಚಿವರಾದ ನಿರ್ಮಲಾ ಸೀತಾರಾಮನ್, ಇಂದು ಬಜೆಟ್ ಮಂಡಿಸಲಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ಸಮಗ್ರ ಶಿಶು ಯೋಜನೆ; ದ್ವಿ ಭಾಷಾ ಬೋಧನೆಯ, ಪೂರ್ವ ಪ್ರಾಥಮಿಕ ತರಗತಿಗಳು ಕಾರ್ಯಾರಂಭ – ಲಕ್ಷ್ಮೀ ಹೆಬ್ಬಾಳಕರ, ಮಾಹಿತಿ.
- ವಾಲ್ಮೀಕಿ ನಿಗಮದ ಹಗರಣ; ಕೇಂದ್ರ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲಿ – ವಿಶ್ವೇಶ್ವರ ಹೆಗಡೆ ಕಾಗೇರಿ, ಲೋಕಸಭೆಯಲ್ಲಿ, ಪ್ರಸ್ತಾಪ.
- ಫ್ಯಾಮಿಲಿ ಪ್ಲ್ಯಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ, 75ನೇ ವರ್ಷಕ್ಕೆ ಪದಾರ್ಪಣೆ.
- ವಿಶ್ವ ಮೆದುಳು ಆರೋಗ್ಯ ಜಾಗೃತಿ ದಿನದ ಹಿನ್ನೆಲೆ, ರಾಜ್ಯಾದ್ಯಂತ ವಿಶೇಷ ಕಾರ್ಯಕ್ರಮ.
- ಪ್ಯಾರಿಸ್ ಒಲಿಂಪಿಕ್ಸ್; ರಾಜ್ಯದ 9 ಕ್ರೀಡಾಪಟುಗಳು ಭಾಗಿ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.**

<><><>